ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ

ಸಿ.ಸಿ. ನಂ.4735-2023
ಸಿ.ಡಬ್ಲ್ಯೂ -6 ಪಿ.ಡಬ್ಲ್ಯೂ -5

| | | |
|---|---|---|
| ಸಾಕ್ಷಿಯ ಹೆಸರು | - | ನರೇಶ |
| ಗಂಡನ ಹೆಸರು | - | ವೀರಣ್ಣಾ |
| ವಯಸ್ಸು | - | 28 ವರ್ಷ |
| ಉದ್ಯೋಗ | - | ಕೂಲಿಕೆಲಸ |
| ವಾಸ | - | ಹುಮನಾಬಾದ. |

ದಿನಾಂಕಃ 02-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ಚಾಸಾ-1, 4, 5, & 7 & ಆರೋಪಿತನ ಪರಿಚಯ ಇರುತ್ತದೆ.

ದಿ: 19.04.2023 ರಂದು ರಾತ್ರಿ 8.00 ಗಂಟೆಗೆ ನಾನು & ನನ್ನ ಗೆಳೆಯ ರಾಹುಲ ನಿವ್ ಅಪೋಸ್ತಿಲಿಕ ಚರ್ಚ ಹತ್ತಿರ ಇದ್ದಾಗ ದುಡ್ಡಿನ ವಿಚಾರವಾಗಿ ಚಾಸಾ.1 ರವರ ಜೊತೆ ಆರೋಪಿತನು ಜಗಳ ಮಾಡುತ್ತಿದ್ದನು. ಆರೋಪಿತನು ಕೈಯಿಂದ, ಹೊಟ್ಟೆಯಲ್ಲಿ ಹೊಡೆದು, ಹಾಗೂ ಕಬ್ಬಿಣದ ಪಂಚ ಹಚ್ಚಿ ತಲೆಗೆ ಹೊಡೆದಿರುತ್ತಾನೆ, ನಂತರ ಆರೋಪಿತನು ದುಡ್ಡು ಕೊಡದೆ ಇದ್ದರೆ ನಿನಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೇದರಿಕೆ ಹಾಕಿರುತ್ತಾನೆ. ನಾನು & ಚಾಸಾ.5 & 7 ರವರು ಜಗಳವನ್ನು ನೋಡಿ ಬಿಡಿಸಿಕೊಂಡಿರುತ್ತೇವೆ. ನಾನು ಈ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

ಮು.ಮಾ.ನ್ನು & ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃಶ್ರೀ. ಆರ್.ಜೆ.ಎನ್. ಆರೋಪಿ ಪರ ವಕೀಲರಿಂದಃ

ಚಾಸಾ.1 ರವರ ಮನೆಯಿಂದ 10 ಅಡಿ ಅಂತರದಲ್ಲಿ ನಾನು ರಾಹುಲ್ ನಿಂತಿದ್ದೇವು. ಚಾಸಾ.5 ರವರು ನಾನು ಹಾಗೂ ರಾಹುಲ ನಮ್ಮ ಮನೆಯ ಮುಂದೆ ನಿಂತು ಮಾತನಾಡುತ್ತಿದ್ದರು ಎಂದು ಹೇಳಿದ್ದಾರೆ ಎಂದರೆ ಅವರ ಮನೆಯ 10 ಅಡಿ ದೂರದಲ್ಲಿ ನಿಂತು

ಮಾತನಾಡುತ್ತಿದ್ದರು ಎಂದು ನುಡಿಯುತ್ತಾರೆ. ಆ ದಿನ ಚಾಸಾ.5 ರವರು ನಮ್ಮ ಜೊತೆಯಲ್ಲಿರಲಿಲ್ಲ. ಆದರೆ ಅವರ ಮನೆಯ ಬಾಗಿಲ ಹತ್ತಿರ ನಿಂತಿದ್ದರು. ನೀವು ಅಲ್ಲಿ ನಿಂತಾಗ ಆರೋಪಿ ಅದೇ ರಸ್ತೆಯಲ್ಲಿ ತಮ್ಮ ಮನೆಗೆ ಹೊರಟಿದ್ದನು ಎಂದರೆ ಸರಿ. ಆಗ ಚಾಸಾ.1 ರವರು ಮನೆಯಿಂದ ಹೊರಗೆ ಬಂದು ನೀವು ನನಗೆ ಯಾವುದೇ ದುಡ್ಡು ಕೊಡುವುದಿಲ್ಲ ಎಂದು ಜಗಳ ತೆಗೆದಿರುತ್ತಾರೆ ಎಂದರೆ ಸರಿ. ನಂತರ ಆರೋಪಿ &ಚಾಸಾ.1 ರವರ ಮಧ್ಯೆ ರಾಜಿ ಸಂದಾನ ,ಮಾಡಿಸಿ ಚಾಸಾ.1 ರವರಿಗೆ ನಿಮ್ಮ ಗೆಳೆಯ ದುಡ್ಡು ಕೊಡದೆ ಇದ್ದರೆ ನೀನು ಕೊಡಬೇಕು ಎಂದು ಹೇಳಿದ್ದಿರಿ ಎಂದರೆ ಸರಿ. ನಂತರ ಆರೋಪಿ & ಚಾಸಾ.1 ರವರು ಅವರವರ ಮನೆಗೆ ಹೋದರು ಎಂದರೆ ಚಾಸಾ.1 ರವರು ಠಾಣೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

ಘಟನೆ ನಡೆದ ತಕ್ಷಣ ತಲೆಗೆ ಪೆಟ್ಟಾಗಿದ್ದರಿಂದ ಆಸ್ಪತ್ರೆಗೆ ಹೊಗಿ ನಂತರ ಠಾಣೆಗೆ ಹೋಗಿರುತ್ತಾರೆ. ನಿಖರವಾದ ಸಮಯ ನನಗೆ ಗೊತ್ತಿರುವುದಿಲ್ಲ. ಘಟನೆ ನಡೆದ ದಿನವೆ ಚಾಸಾ.1 ರವರು ಠಾಣೆಗೆ ಹೋಗಿರುತ್ತಾರೆ ಎಂದರೆ ಸರಿ. ವಿಜಯಕುಮಾರ ರವರು ಎಂಬುವರು ನನಗೆ ಪರಿಚಯ ಇರುತ್ತಾರೆ. ಅವರು ಆರೋಪಿ ಮೇಲೆ ಒಂದು ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸದರಿ ಚಾಸಾ.5 ರವರ ಸೋದರ ಎಂದೆರೆ ಸರಿ. ನಾನು & ಚಾಸಾ.1 ರವರು ಸ್ನೇಹಿತ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಪ್ರಕರಣಕ್ಕೆ ಇದಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಚಾಸಾ.1 ಹಾಗೂ 5 ರವರು ಆರೋಪಿಗೆ ಯಾವುದೇ ಹಣ ಕೊಡುವುದಿಲ್ಲ ಎಂದು ಅವರನ್ನೇ ತಡೆಹಿಡಿದು ನೀವೆ ಜಗಳ ಮಾಡಿದ್ದಿರಿ ಎಂದರೆ ಸರಿಯಲ್ಲ. ಎಂ.ಓ.1 ಸ್ಟೀಲ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆ ಕಾರಣಕ್ಕಾಗಿ ನೀವು ಹೊಡಬಡೆ ಮಾಡಿದರು ಸಹ ಆರೋಪಿ ವಿರುದ್ಧ ಪ್ರಕರಣ ದಾಖಲು ಮಾಡಿಲ್ಲ ಎಂದರ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಅವರಿಗೆ ಹಣವನ್ನು ಕೊಡುವುದು ತಪ್ಪಿಸಿಕೊಳ್ಳಲು ಹಾಗೂ ವಿಜಯಕುಮಾರ ರವರ ವಿರುದ್ಧ ನೀಡಿದ ದೂರನ್ನು ವಾಪಸ ಪಡೆಯಬೇಕೆಂಬ ಉದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚಾಸಾ.1 ರವರಿಗೆ ಮು.ಮಾ.ರಿಂದ ಹೊಡೆದಿಲ್ಲ, ಅಕ್ರಮವಾಗಿ ತಡೆದು  ನಿಲ್ಲಿಸಿಧ, ಅವಾಚ್ಯವಾಗಿ ಬೈದಿಲ್ಲ, ಜೀವ ಬೇದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಎದುರುಗಡೆ ತಂಗಿಮ್ಮ ಗಂಡ ರಾಜಪ್ಪ ಎಂಬುವರ ಮನೆ ಇರುತ್ತದೆ ಎಂದರೆ ಸರಿ. ಹಾಗೂ ಚರ್ಚು ಇರುವುದರಿಂದ ಸಾಕಷ್ಟು ಜನರು ಸೇರಿರುತ್ತಾರೆ ಎಂದರೆ ಸಾಕ್ಷಿಯು ಆ ದಿನ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದಾಗ

ಸುಮಾರು 6-7 ಜನ ಸೇರಿದ್ದರು. ಆರೋಪಿ ಆ ದಿನ ನಿಮ್ಮ ಮನೆಗೆ ಬಂದಿಲ್ಲ ಯಾವುದೆ ಜಗಳ ತೆಗೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.